ತಲೆಯಾಡಿಸಿದ ಅರುಂಧತಿ ಇನ್ನು ಎಷ್ಟು ಹೊತ್ತು ಎನ್ನುವ ಪ್ರಶ್ನಾರ್ಥಕ ನೋಟವನ್ನು ಅವಳೆಡೆಗೆ ಬೀರಿದಳು. ''ಸಿಸೇರಿಯನ್ ನಡೆಯುತ್ತಿದೆ. ಆ ನಂತರ ನಿಮ್ಮದೇ...'' ಎನ್ನುತ್ತ ನರ್ಸು ಮತ್ತೆ ತನ್ನ ಪಾಡಿಗೆ ತಾನು ಕತ್ತಲಲ್ಲಿ ಕರಗಿದಳು. ಆಕೆ ಹಾಗೆ ಹೋಗುತ್ತಿದ್ದ ಹಾಗೆ ಅರುಂಧತಿಗೆ ಅಲ್ಲಿನ ನೀರವತೆ ಒಮ್ಮೆ ಭಯದ ಕಂಪನ ಹುಟ್ಟಿಸಿತು. ಮರುಕ್ಷಣವೇ ನಿರಾಳವೂ ಅನ್ನಿಸಿತು.

ತನ್ನ ಪಾಡಿಗೆ ತಾನು ತನ್ನ ಮನಸ್ಸನ್ನು ಹರಿಯಬಿಟ್ಟು ಈ ವಾಸ್ತವದ ಕನವರಿಕೆಗಳಿಂದ ತುಸು ದೂರ ಅಡ್ಡಾಡಿ ಬರಬೇಕು ಅಂದುಕೊಂಡಳಾದರೂ, ಹಾಕಿದ್ದ ಏಸಿಯ ಕೊರೆತ ಅವಳನ್ನು ತಡೆ ಹಿಡಿಯಿತು. ಕಾಲ ಹೆಬ್ಬೆರಳಿನಿಂದ ಹಿಡಿದು ಕೈ ಬೆರಳಿನವರೆಗೆ ಆ ನಡುಕ ಹರಡಿಕೊಂಡದ್ದು ತನ್ನ ಗಮನಕ್ಕೆ ಈವರೆಗೂ ಹೇಗೆ ಬರದೇ ಹೋಯಿತು ಎಂದು ಅಚ್ಚರಿಪಟ್ಟಳು. ಹೊದ್ದಿದ್ದ ಹಸಿರು ಗೌನನ್ನೂ ಗಟ್ಟಿಯಾಗಿ ದೇಹಕ್ಕೆ ಸುತ್ತಿಕೊಂಡರೂ ಹೆಪ್ಪುಗಟ್ಟಿಸುವಂತಿದ್ದ ತಂಪು ಅವಳ ದೇಹವನ್ನು ಮುರುಟಿಸುತ್ತಿತ್ತು. ಹರಡಿದ್ದ ನಿಶ್ಶಬ್ದದಲ್ಲಿ ತಾನು ತೀರಾ ಒಂಟಿಯಾಗಿರುವಂತೆ ಆಕೆಗೆ ಭಾಸವಾಯಿತು. 'ಮನುಷ್ಯ, ಬೆಳಕಿನಲ್ಲಿ ಏನೆಲ್ಲ ಸಂಬಂಧಗಳ ಜೊತೆಯಲ್ಲಿ ಕಲೆತಿದ್ದೇನೆಂದುಕೊಂಡರೂ ಉಳಿವ ಕತ್ತಲೆಯಲ್ಲಿ ಮನುಷ್ಯ ಎಂದಿಗೂ ಏಕಾಂಗಿಯೇ' ಎಂದೋ ಎಲ್ಲೋ ಓದಿದ ಮಾತು ನೆನಪಾಯಿತು. ಹೌದು ತಾನು ಎಂದಿಗೂ ಆ ಸ್ಥಿತಿಯಲ್ಲಿಯೇ ಉಳಿಯಬೇಕಾದವಳು ಎಂದುಕೊಳ್ಳುತ್ತ ಸುಮ್ಮನೆ ತೋಳನ್ನು ತಲೆಗಿಟ್ಟು ಮಲಗಿದಳು. ಬೇಡ ಬೇಡವೆಂದರೂ ಬದುಕಿನ ಅಲೆಗಳು ಒಂದರ ಹಿಂದೊಂದರಂತೆ ಸಣ್ಣಗೆ ಬಂದು ದಡಕ್ಕೆ ಅಪ್ಪಳಿಸತೊಡಗಿ ಮನಸ್ಸು ಕೋಣೆಯಿಂದಾಚೆಗೆ ಚಿಗಿತು ಓಡಿತು...

"ಏನಾಗಿದೆ ಅಂತ ಮದುವೆ ಬೇಡ ಅಂತಿ, ಮನೆ ತುಂಬ ಆಳು ಕಾಳು, ಬಂಗಲೆ ಬೇಕಾದಷ್ಟು ದುಡ್ಡಿದೆ. ಏನೋ ಸ್ವಲ್ಪ ವಯಸ್ಸಾಗಿದೆ; ಬಾಯಿ ಮುಚ್ಚಿಕೊಂಡು ಒಪ್ಕೋ. ಬಂದ ಗಂಡನ್ನೆಲ್ಲ ಬೇಡ ಅನ್ನೋಕೆ ನೀನೇನು ಮಹಾರಾಜನ ಮಗಳಲ್ಲ" ಎಂದು ತಲೆಯ ಮೇಲೆ ಮೊಟಕಿ ಅನ್ನ ಹಾಕಿದ ಅಮ್ಮ, "ದಯವಿಟ್ಟು ಬೇಡ ಅನ್ನಬೇಡ ಮಗಳೇ" ಎನ್ನುತ್ತ ಕೈ ಮುಗಿದ ಅಪ್ಪ, ಅಕ್ಕನ ಮದುವೆಯಾದರೆ ಸಾಕು ತಮ್ಮ ದಾರಿ ಸುಗಮವಾದೀತು ಎನ್ನುವ ನಿರೀಕ್ಷೆಯಲ್ಲಿ ನಿಂತಿದ್ದ ತಂಗಿಯರನ್ನು ನಿರಾಸೆಗೊಳಿಸುವುದು ತನ್ನಿಂದ ಸಾಧ್ಯವೇ ಆಗಿರಲಿಲ್ಲ. ಡಿಗ್ರಿ ಮಾರ್ಕ್ಸ್ ಕಾರ್ಡುಗಳನ್ನು ಟ್ರಂಕಿನಡಿಯಲ್ಲಿ ತುಂಬಿಡುತ್ತ ಒಂದು ಬಾರಿಗೂ ತನ್ನನ್ನು ಕಣ್ಣೆತ್ತಿಯೂ ನೋಡದವನ ಜೊತೆಯಲ್ಲಿ ಹೆಜ್ಜೆ ಬೆರೆಸುವಾಗ ಅರಿಯದ ಲಜ್ಜೆ ಆವರಿಸಿತ್ತು. ಢಾಳು ಢಾಳು ಬಣ್ಣಗಳಲ್ಲಿ ಮಿಂದೇಳುತ್ತ, "ನಮ್ ಅರುಂಧತಿ ಅದೃಷ್ಟ ಅಂದ್ರೆ ಅದೃಷ್ಟನಾಪ್ಪ" ಎಂದೆಲ್ಲ ಕರುಬುವಂತೆ ಮಾಡಿ ಊರ ಮೆಚ್ಚಿಸಿದ ಮದುವೆ ಮನಸ ಬಾಗಿಲನ್ನು ತೆರೆಯಲಿಲ್ಲ.

ಕನಸು ತುಂಬಿದ ರಾತ್ರಿಯಲ್ಲಿ ಸುವಾಸನೆ ಊದುಬತ್ತಿಗಳ ನಡುವೆ ಕೂತಿದ್ದವಳ ಎದೆಗೊದ್ದ ಹಾಗೆ, "ನೀನೆಂದರೆ ನನಗೇನು ಅನ್ನಿಸೋದೆ ಇಲ್ಲ" ಎನ್ನುತ್ತ ದಿಂಬುಗಳ ಬೇರ್ಪಡಿಸಿ ಎದ್ದು ಹೋಗಿದ್ದ ಗೌತಮ. ಹಾಗವನು ಹಾಸಿಗೆಗಳ ಬೇರ್ಪಡಿಸಿದ ಮೇಲೂ, ಹೊದಿಕೆಯೊಳಗೆ ತಾನೊಬ್ಬನೆ ಸೇರಿಕೊಂಡ ಮೇಲೆಯೂ ಅವನು ತನ್ನ ಶರ್ಟಿನ ಗುಂಡಿಯನ್ನು ತಾನೇ ಹಾಕಿಕೊಳ್ಳುವಾಗಲೂ ತನ್ನಲ್ಲಿ ಪ್ರೀತಿಯ ಹುಚ್ಚಿತ್ತು. ಒಂದಲ್ಲ ಒಂದು ದಿನ ತಾನು ಅವನನ್ನು ಒಲಿಸಿಕೊಳ್ಳುವೆನೆಂಬ ಭ್ರಮೆಯಿತ್ತು. ಹೀಗಾಗಿಯೇ ತಾನು ಅವನನ್ನು ಇನ್ನಿಲ್ಲದಂತೆ ಆರಾಧಿಸುತ್ತಲೇ ಹೋಗಿದ್ದು, ಅವನ ಸಲುವಾಗಿಯೇ ಸೀರೆಗಳನ್ನು ಕೊಂಡಿದ್ದು, ಹೇರ್‌ಕ್ಲಿಪ್‌ಗಳನ್ನು ಬದಲಾಯಿಸಿದ್ದು. ಹೂ ಮುಡಿದದ್ದು, ಬಳೆತೊಟ್ಟಿದ್ದು. ಅಗಲಗಲ ಬಿಂದಿಗಳ ಬದಲಾಯಿಸಿ ಅಂಟಿಸಿಕೊಂಡಿದ್ದು. ಅವ ಬದಲಾಗಲೇ ಇಲ್ಲ. "ನೀನು ಹೀಗೆಲ್ಲ ನನ್ನ